<u>ಸಾಕ್ಷಿಯನ್ನು ದಿನಾಂಕ 05-03-2019ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಕೆ.ಎಂ. ರವರಿಂದಃ-</u>

ದಾವಾಸ್ವತ್ತು ರಾಮಪ್ಪ ಎಂಬುವವರಿಗೆ ಸೇರಿದ್ದು, ಅವರಿಂದ ನಾವು ಆರು ಜನ ದಾವಾಸ್ವತ್ತನ್ನು ಕೊಂಡುಕೊಂಡಿರುತ್ತೇನೆ. ರಾಮಪ್ಪ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಕ್ರಯಪತ್ರ ನನ್ನ ಚಿಕ್ಕಪ್ಪನ ಬಳಿ ಇರುತ್ತದೆ. ದಿನಾಂಕ 23-12-1993ರಂದು ಕ್ರಯಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ರಾಮಪ್ಪ ನಮಗೆ ದಾವಾಸ್ವತ್ತನ್ನು ಮಾರಾಟ ಮಾಡುವ ಸಮಯದಲ್ಲಿ ಖಾತೆ ಅವರ ಹೆಸರಿನಲ್ಲಿತ್ತು. ಸದರಿ ಕ್ರಯಪತ್ರದ ಪ್ರಕಾರ ಸದರಿ ಸ್ವತ್ತಿನ ಖಾತೆ ನಮ್ಮ ಚಿಕ್ಕಪ್ಪನ ಹೆಸರಿಗೆ ಆಗಿರುತ್ತದೆ. ನಾವು ಆರು ಜನ ಸೇರಿ ನನ್ನ ಚಿಕ್ಕಪ್ಪನಾದ ವೆಂಕಟರಾಮಪ್ಪ ಎಂಬುವವರ ಹೆಸರಿಗೆ ನೋಂದಣಿ ಮಾಡಿಸಿರುತ್ತೇವೆ. ಸದರಿ ವೆಂಕಟರಾಮಪ್ಪ ದಾವಾಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಷೆಡ್ಯೂಲ್ ಪತ್ರ ಬರೆದುಕೊಟ್ಟಿರುತ್ತಾರೆ. ದಿನಾಂಕ 21-10-1998ರಂದು ನನ್ನ ಹೆಸರಿಗೆ ಸದರಿ ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರ ನನ್ನ ಬಳಿ ಇರುತ್ತದೆ. ಸದರಿ ಪತ್ರದ ಪ್ರಕಾರ ನನ್ನ ಹೆಸರಿಗೆ ಖಾತೆ ಬದಲಾಗಿರುತ್ತದೆ. ಸದರಿ ಸ್ವತ್ತಿನ ಖಾತೆ ವೆಂಕಟರಾಮಪ್ಪನ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ನೀಡಿರುವುದಿಲ್ಲ. ದಿನಾಂಕ 21-10-1998ರಂದು ನನ್ನ ಹೆಸರಿಗೆ ಖಾತೆಯಾಗಿರುತ್ತದೆ. ಸದರಿ ವಿಚಾರವನ್ನು ನಾನು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ವಿಚಾರಗಳನ್ನು ನಾನು ಈ ಕೇಸಿನಲ್ಲಿ ಹೇಳಿ ಬರೆಯಿಸಿರುತ್ತೇನೆ.

ನಾನು ಅಸಲು ದಾವೆ ಸಂ. 407/2013ರಂತೆ ದಾವಾಸ್ವತ್ತಿಗೆ ಸಂಬಂಧಿಸಿದಂತೆ ವೆಂಕಟೇಶಪ್ಪ ಎಂಬುವವರ ವಿರುದ್ಧ ದಾವೆ ಸಲ್ಲಿಸಿರುತ್ತೇನೆ. ಸದರಿ ದಾವೆ ವಿಚಾರಣೆಗೆ ಬಾಕಿ ಇರುತ್ತದೆ. ಸದರಿ ದಾವೆಯ ವಿಚಾರವನ್ನು ಈ ದಾವೆಯಲ್ಲಿ ನಾನು ಹೇಳಿರುವುದಿಲ್ಲ. ನಮ್ಮದು ಟಿ.ಗೊಲ್ಲಹಳ್ಳಿ ಗ್ರಾಮ ಪಂಚಾಯತಿ. ಖಾತಾ ನಂ. 211 ಪಂಚಾಯತಿಯಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನಾನು ದಾವೆ ಸಲ್ಲಿಸುವ ಸಮಯದಲ್ಲಿ ಈಗ ನನಗೆ ತೋರಿಸಿದ ಫೋಟೋಗಳಲ್ಲಿ ಇರುವ ತಳಪಾಯವನ್ನು ಪ್ರತಿವಾದಿ ಹಾಕಿದ್ದರು ಎಂದರೆ ಸರಿ. ಸಾಕ್ಷಿಯು ಸದರಿ ಫೋಟೋಗಳನ್ನು

ನೋಡಿ ಗುರುತಿಸಿದ್ದರಿಂದ, ಸದರಿ ಫೋಟೋಗಳನ್ನು ಕ್ರಮವಾಗಿ ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು.

ನಮ್ಮ ಗ್ರಾಮದಲ್ಲಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಳ್ಳಲು ಪಂಚಾಯತಿ ಕಡೆಯಿಂದ ಬಸವಕಲ್ಯಾಣ ಯೋಜನೆಯಲ್ಲಿ ಹಣ ನೀಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಹೆಂಡತಿಯ ಹೆಸರು ಶಾರದಮ್ಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಶಾರದಮ್ಮಳಿಗೂ ಬಸವಕಲ್ಯಾಣ ಯೋಜನೆಯಡಿ ಹಣ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಫೋಟೋಗಳಲ್ಲಿ ಇರುವುದು ಪ್ರತಿವಾದಿ ಕಟ್ಟಿರುವ ಮನೆ ಎಂದರೆ ಸರಿ. ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ, ಸದರಿ ಫೋಟೋಗಳನ್ನು ಕ್ರಮವಾಗಿ ನಿಡಿ-3ರಿಂದ ನಿಡಿ-7 ಎಂದು ಗುರುತಿಸಲಾಯಿತು. ಪ್ರತಿವಾದಿಗಳು ಮನೆಯನ್ನು ಕಟ್ಟುತ್ತಿರುವ ವಿಚಾರವನ್ನು ನಾವು ನ್ಯಾಯಾಲಯಕ್ಕೆ ತಿಳಿಸಿರುತ್ತೇವೆ. ನಾನು ಪೊಲೀಸರಿಗೆ ಮತ್ತು ಪಿಡಿಓಗಳಿಗೆ ದೂರು ನೀಡಿರುತ್ತೇನೆ. ಪೊಲೀಸರು ಸದರಿ ಪ್ರತಿವಾದಿ ಮನೆಯನ್ನು ಯಾವ ಸ್ವತ್ತಿನಲ್ಲಿ ಕಟ್ಟುತ್ತಿದ್ದಾರೆ ಎಂದು ಪಿಡಿಓರವರಿಗೆ ಪತ್ರ ಬರೆದಿರುತ್ತಾರೆ ಎಂದರೆ ಸರಿ. ಸದರಿ ಪಿಡಿಓ ನನಗೆ ಮತ್ತು ಪ್ರತಿವಾದಿಗೆ ತಾವು ಸ್ಥಳ ಪರಿಶೀಲನೆ ಮಾಡಲು ಸ್ಥಳಕ್ಕೆ ಬರುತ್ತಿರುದಾಗಿ ಮತ್ತು ನಾವು ಹಾಜರು ಇರಬೇಕೆಂದು ನೋಟೀಸು ನೀಡಿದ್ದರು ಎಂದರೆ ಸರಿ. ಸದರಿ ದಿನ ಪೊಲೀಸರು ಮತ್ತು ಪಿಡಿಓ ಸ್ಥಳಕ್ಕೆ ಬಂ ದಿದ್ದರು ಎಂದರೆ ಸಾಕ್ಷಿಯು ಪಿಡಿಓ ಮತ್ತು ಸೆಕ್ರೆಟರಿ ಮಾತ್ರ ಬಂದಿದ್ದರು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಪಿಡಿಓ ಸ್ವತ್ತುಗಳನ್ನು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಿಡಿಓ ಮತ್ತು ಪೊಲೀಸರು ಪ್ರತಿವಾದಿ ಅವರ ನಿವೇಶನದಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸುಳ್ಳು ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವರದಿಯ ಪ್ರತಿಯನ್ನು ನಾನು ಪಡೆದಿರುವುದಿಲ್ಲ. ಸದರಿ ವರದಿಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವರದಿಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರದ ಕಾರಣ ಅದು ಸರಿಯಾಗಿದೆಯೋ ಅಥವಾ ಇಲ್ಲವೋ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಪಿಡಿಓರವರನ್ನು ಸದರಿ ವರದಿಯ ಪ್ರತಿಯನ್ನು ನೀಡುವಂತೆ ಕೇಳಿರುವುದಿಲ್ಲ.

ನಾನು ದಾವೆ ಸಲ್ಲಿಸುವ ಸಮಯದಲ್ಲಿ ದಾವಾಸ್ವತ್ತಿನಲ್ಲಿ ಪ್ರತಿವಾದಿ ತಳಪಾಯ ಹಾಕಿರುವ ವಿಚಾರವನ್ನು ತಿಳಿಸಿರುತ್ತೇನೆ. ನಾನು ನನ್ನ ಸ್ವತ್ತನ್ನಾಗಲೀ ಅಥವಾ ಪ್ರತಿವಾದಿಯ ಸ್ವತ್ತನ್ನಾಗಲೀ ಅಳತೆ ಮಾಡಿರುವುದಿಲ್ಲ. ಪ್ರತಿವಾದಿ 15 ಅಡಿ ಸ್ವತ್ತನ್ನು ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾನೆ. 15 ಅಡಿ ಒತ್ತುವರಿ ಮಾಡಿರುವ ಬಗ್ಗೆ ನಾನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನಿಡಿ-3ರಲ್ಲಿರುವ ಕಲ್ಲುಕಂಬಗಳಿರುವ ನಿವೇಶನ ನನಗೆ ಸೇರಿದ ನಿವೇಶನ ಆಗಿರುತ್ತದೆ. ರಾಮಪ್ಪ, ವೆಂಕಟರಾಮಪ್ಪನಿಗೆ ಸ್ವತ್ತನ್ನು ಮಾರಾಟ ಮಾಡಿದಾಗ ಅದು ಖಾಲಿ ಜಾಗ ಇತ್ತು ಮತ್ತು ನಾನು ವೆಂಕಟರಾಮಪ್ಪನಿಂದ ಕೊಂಡುಕೊಂಡಾಗಲೂ ಖಾಲಿ ಜಾಗ ಆಗಿತ್ತು. ಸದರಿ ಖಾಲಿ ಜಾಗದಲ್ಲಿ ನಾನು 1998ರಲ್ಲಿ ಹುಲ್ಲಿನ ಮನೆ ಕಟ್ಟಿರುತ್ತೇನೆ. ಸದರಿ ಜಾಗದಲ್ಲಿ ನಾನು ಮನೆ ಕಟ್ಟಿದ್ದ ಬಗ್ಗೆ ದಾಖಲೆಗಳು ಇರುತ್ತದೆ. ಸದರಿ ಮನೆಯ ನಂಬರ್-177 ಆಗಿರುತ್ತದೆ. ಪ್ರತಿವಾದಿಗಳು ಅವರಿಗೆ ಸೇರಿದ ನಿವೇಶನದಲ್ಲಿ ಮನೆ ಕಟ್ಟುತ್ತಿದ್ದರೂ ಸಹ ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟೇಶಪ್ಪ ಎಂಬುವವರೂ ಸಹ ಯಾವುದೇ ಗುಡಿಸಲು ಹಾಕಿರುವುದಿಲ್ಲ. ಪ್ರತಿವಾದಿ ಸರ್ಕಾರದಿಂದ ಹಣ ಪಡೆದು ಮನೆ ಕಟ್ಟುತ್ತಿದ್ದಾರೆ ಎಂಬ ದುರುದ್ದೇಶದಿಂದ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನ ಉತ್ತರಕ್ಕೆ ಸರ್ಕಾರಿ ಎಂದು ಇರುತ್ತದೆ ಎಂದರೆ ಸರಿ. ಅಲ್ಲಿ ರಸ್ತೆ ಎಂದು ಇರುವುದಿಲ್ಲ ಎಂದರೆ ಸರಿ. ಸದರಿ ರಸ್ತೆಯನ್ನು ಯಾವಾಗ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾನು ಉತ್ತರ ದಿಕ್ಕಿಗೆ ಸರ್ಕಾರಿ ಜಾಗ ಇದ್ದು, ನಂತರ ರಸ್ತೆ ಮಾಡಿರುತ್ತಾರೆ ಎಂದು ದಾವೆ ಸಲ್ಲಿಸುವ ಸಮಯದಲ್ಲಿ ತಿಳಿಸಿರುತ್ತೇನೆ. ಪ್ರತಿವಾದಿ ಪೂ-ಪ: 12 ಅಡಿ ಮತ್ತು ಉ-ದ: 20 ಅಡಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ. ನಮ್ಮ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ. ಪ್ರತಿವಾದಿ ಮನೆ ಕಟ್ಟಿರುವ ಪೂರ್ವ ದಿಕ್ಕಿಗೆ ಪ್ರತಿವಾದಿಗೆ ಸೇರಿದ 15 ಅಡಿ ಖಾಲಿ ಜಾಗ ಇರುತ್ತದೆ. ಪಶ್ಚಿಮ ದಿಕ್ಕಿನಲ್ಲಿ ಇದ್ದ ರಸ್ತೆ ಮೊದಲು ಚಿಕ್ಕದಿದ್ದು ಈಗ ರಸ್ತೆ ಅಗಲವಾಗಿ ಮಾಡಿರುತ್ತಾರೆ. ಸದರಿ ರಸ್ತೆ ಅಗಲ ಮಾಡುವಾಗ ರಸ್ತೆಯ ಎರಡೂ ಬದಿಯಲ್ಲಿ ಸ್ವಲ್ಪ ಜಾಗವನ್ನು ರಸ್ತೆಗೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ 8 ಗುಂಟೆ ಪೈಕಿ ಎಷ್ಟು ಅಡಿ ರಸ್ತೆಗೆ

ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ 8 ಗುಂಟೆ ಪೈಕಿ ರಸ್ತೆಗೆ ಜಾಗವನ್ನು ತೆಗೆದುಕೊಂಡಿರುವ ಬಗ್ಗೆ ದಾವೆ ಸಲ್ಲಿಸುವ ಸಂದರ್ಭದಲ್ಲಿ ಹೇಳಿರುವುದಿಲ್ಲ. ಸದರಿ 8 ಗುಂಟೆ ಜಮೀನಿನ ಪೂರ್ವಕ್ಕೆ: ಮುನಿಸ್ವಾಮಪ್ಪ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ಕಾರಿ ಮತ್ತು ದಕ್ಷಿಣಕ್ಕೆ: ಲಕ್ಷ್ಮೀನಾರಾಯಣಪ್ಪರವರ ಸ್ವತ್ತು ಇರುತ್ತದೆ. ನಿಜಾಂಶವನ್ನು ಮುಚ್ಚಿಟ್ಟು ನಾನು ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ,

(ಲೋಕೇಶ. ಸಿ.ಎನ್)
1ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್